O.S. NO. 80/2019
PW - 1.
Dated 16-09-2025

ಸಾಕ್ಷಿಯನ್ನು ಈ ದಿನ ದಿನಾಂಕ 16-09-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 3 ನೇ ಪ್ರತಿವಾದಿ ಪರವಾಗಿ ಶ್ರೀ ಎ ಸಿ ಟಿ ವಕೀಲರಿಂದಃ

ನನ್ನ ಶಿಕ್ಷಣ 6 ನೇ ತರಗತಿ ವರೆಗೆ ಆಗಿರುತ್ತದೆ. ದಾವಾ ಆಸ್ತಿ ಚಕ್ಕಬಂದಿ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ನಮ್ಮ ಮನೆತನಕ್ಕೆ ಪಿತ್ರಾರ್ಜಿತವಾಗಿ ಬಂದಿರುತ್ತವೆ. ನಮ್ಮ ತಂದೆ 2019 ರಲ್ಲಿ ಮೃತ ಪಟ್ಟಿರುತ್ತಾರೆ, ನನ್ನ ತಾಯಿ 2012 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ದಿನಾಂಕ 08-08-2012 ರಂದು ಮೃತಪಟ್ಟಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ನನ್ನ ತಾಯಿ 2019 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆಗೆ ದಾವಾ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿಗಳು ಇರುತ್ತವೆ. ನಾನು ಪ್ರತಿವಾದಿಗಳಿಗೆ ದಾವಾ ಆಸ್ತಿಗಳಲ್ಲಿ ನನ್ನ ತಾಯಿ ಮೃತಪಟ್ಟ ನಂತರ 2019 ರಲ್ಲಿ ಪಾಲು ವಿಭಾಗ ಕೇಳಿರುತ್ತೇನೆ. ನಾನು ದಾವಾ ಆಸ್ತಿಯ ಯಾವತ್ತು ಕಬ್ಜಾದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇದ್ದಾಗ ದಾವಾ ಆಸ್ತಿಗಳಲ್ಲಿ ಪಾಲು ಕೇಳಿಲ್ಲ ಎಂದರೆ ನಾನು ಕೇಳಿದ್ದೆ ಅವರು ಆ ಮೇಲೆ ನೊಡೋಣ ಎಂದು ಹೇಳುತ್ತಾ ಬಂದಿರುತ್ತಾರೆ. ದಾವಾ ಆಸ್ತಿ ಸರ್ವೆ ನಂ 125 ರಲ್ಲಿ ಪ್ರತಿವಾದಿಗಳು 3 ಜನ ಸೇರಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಹೀಗಾಗಿ ಸದರಿ ಮನೆ ಅವರ ಸ್ವಂತ ಆಸ್ತಿ ಇದೆ ಎಂದರೆ ಎಲ್ಲರೂ ಕೂಡಿಯೇ ಮನೆ ಕಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ. ನಾನು 2009 ರಲ್ಲಿ ಮೌಖಿಕವಾಗಿ ಕಬೂಲಿ

O.S. NO. 80/2019

PW - 1.

Dated 16-09-2025

ಕೊಟ್ಟು ನಾನು ದಾವಾ ಆಸ್ತಿಗಳಲ್ಲಿ ನನ್ನ ಹಕ್ಕು ಪ್ರತಿವಾದಿಗಳ ಬಿಟ್ಟು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರಸ್ತುತ ದಾವೆಯ 3 ನೇ ಪ್ರತಿವಾದಿಗೆ ಸಹ ನನ್ನ ಹಾಗೇ ಪಾಲು ಇರುತ್ತದೆ ಎಂದರೆ ಸರಿ.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.